PSI-ESSAY

(1)

ರಚನೆ
ಶಿವಪ್ರಸಾದ ಬಿಸರಹಳ್ಳಿ.

# ನೂತನ ಶಿಕ್ಷಣ ನೀತಿ

"Education is not for mere employement but for empowerment."

"ಶಿಕ್ಷಣ ಕೇವಲ ಉದ್ಯೋಗಕ್ಕೆ ಸೀಮಿತವಾಗಬಾರದು, ಜನರ ಸಬಲೀಕರಣದ ಅಸ್ತ್ರವಾಗಬೇಕು"

ಕೇಂದ್ರ ಸರ್ಕಾರ 2021ನೇ ವರ್ಷದಲ್ಲಿ ಜಾರಿಗೆ ತಂದ "ನೂತನ ಶಿಕ್ಷಣ ನೀತಿ-2020" ಯುವಕ/ ಯುವತಿಯರಿಗೆ ಕೇವಲ ಉದ್ಯೋಗ ಗಿಟ್ಟಿಸಿಕೊಳ್ಳಲು ಮಾತ್ರ ಸಹಾಯ ಮಾಡದೇ, ಅವರನ್ನು ಸಾಮಾಜಿಕ ಕ್ಷೇತ್ರದಲ್ಲಿ ಸಬಲರನ್ನಾಗಿಸುವುದೇ ಎಂಬ ಪ್ರಶ್ನೆಗೆ ಕಾಲವೇ ಉತ್ತರಿಸಬೇಕಿದೆ. "ರಾಷ್ಟ್ರೀಯ ಶಿಕ್ಷಣ ನೀತಿ ಕರಡು" ಅಭ್ಯಸಿಸುವ ಮೂಲಕ ಇದರ ಲಾಭ-ನಷ್ಟಗಳ ಅರಿವು ನಮಗಾಗುತ್ತದೆ.

ತಾವು ಇದನ್ನು SR WORLD ಟೆಲಿಗ್ರಾಂ ಗ್ರೂಪ್ ನಿಂದ ಪಡೆದಿರುವಿರಿ.
ಈಗಾಗಲೇ ಆ ಗ್ರೂಪ್ ನಲ್ಲಿ 2,50,000 ದಷ್ಟು ಸ್ಪರ್ಧಾರ್ಥಿಗಳು JOIN ಆಗಿದ್ದಾರೆ.
ನೀವೂ JOIN ಆಗಿ, ಗ್ರೂಪ್ ಲಿಂಕ್ ಗಾಗಿ 9538781570ಗೆ ವಾಟ್ಸಾಪ್/ಟೆಲಿಗ್ರಾಂ ಮಾಡಿ.

## ಲಾಭಗಳು

### 1. ಮಗು ಕೇಂದ್ರಿತ ಶಿಕ್ಷಣ ವ್ಯವಸ್ಥೆ

ನೂತನ ಶಿಕ್ಷಣ ನೀತಿಯು ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಶಿಕ್ಷಣ ವ್ಯವಸ್ಥೆಯ ವ್ಯಾಪ್ತಿಯೊಳಗೆ ತಂದಿದೆ.

ಹಿಂದಿನ 10+2 ಶಿಕ್ಷಣದ ಬದಲು 5+3+3+4 ಪಠ್ಯಕ್ರಮದ ಶಿಕ್ಷಣ ಜಾರಿಗೆ ಬಂದಿದೆ. ಈ ಹಿಂದೆ ಮಗು ತನಗೆ 6 ವರ್ಷ ಪೂರ್ತಿಯಾದ ನಂತರ ಶಾಲೆಗೆ ಪ್ರವೇಶವನ್ನು ಪಡೆದು ಕಲಿತಿತು, ಇನ್ನು 3 ವರ್ಷ ಪೂರ್ತಿಯಾದ ಕೂಡಲೇ ಶಾಲಾ ದಾಖಲಾತಿ ಪಡೆಯುವುದು ಕಡ್ಡಾಯವಾಗಿದೆ.

"5+3+3+4" ಏನಿದು ?

3 ವರ್ಷಕ್ಕೆ ದಾಖಲೆ ಪಡೆದ ಮಗು ತನಗೆ 8 ವರ್ಷ ಪೂರ್ತಿಯಾದಾಗ 5 ವರ್ಷಗಳ ಶಾಲಾ ಶಿಕ್ಷಣವನ್ನು ಮುಗಿಸಿರುತ್ತದೆ, ಇದನ್ನು "ಅಡಿಪಾಯ ಹಂತ" ಎಂದು ಕರೆಯಲಾಗಿದೆ. ತದನಂತರ 11 ವರ್ಷಕ್ಕೆ 8ನೇ ತರಗತಿ ಮುಗಿಸಿ ಪೂರ್ವಭಾವಿ ಹಂತ ಪೂರ್ತಿಯಾಗುತ್ತದೆ. ಮಗುವಿನ 14 ವರ್ಷವಾಗುವಷ್ಟರಲ್ಲಿ 11ನೇ ತರಗತಿ ಪೂರ್ತಿಯಾಗುತ್ತದೆ. ಇದನ್ನು ಮಾಧ್ಯಮಿಕ ಹಂತವೆಂದು ಕರೆಯಲಾಗಿದ್ದು, ತದನಂತರ 4 ವರ್ಷದ ಶಿಕ್ಷಣವನ್ನು "ಪ್ರೌಢಶಿಕ್ಷಣ ಹಂತ" ವೆಂದು ಕರೆದು ಇದು ಮಗುವಿನ 18 ವರ್ಷಕ್ಕೆ ಪೂರ್ತಿಯಾಗುತ್ತದೆ.

2. ಶಿಕ್ಷಣದ ಸಾರ್ವತ್ರಿಕರಣ & ಆಧಾರ ಅನುದಾನ ಬಿಡುಗಡೆ

2030 ರೊಳಗಾಗಿ ಶಾಲಾ ಶಿಕ್ಷಣವನ್ನು ಪ್ರತಿಶತ 100 ರಷ್ಟು & ಉನ್ನತ ಶಿಕ್ಷಣದಲ್ಲಿ ಪ್ರತಿಶತ 50 ರಷ್ಟು ದಾಖಲಾತಿ ಮಾಡುವ ಮೂಲಕ ಸರ್ವರಿಗೂ ಶಿಕ್ಷಣ ತಲುಪಿಸುವ ಮಹದಾಸೆ ನೂತನ ಶಿಕ್ಷಣ ನೀತಿಗೆ ಇದೆ. ಇದರೊಂದಿಗೆ

ದೇಶದ ಜಿ.ಡಿ.ಪಿಯ ಪ್ರತಿಶತ 6ರಷ್ಟು ಹಣವನ್ನು ಶಿಕ್ಷಣಕ್ಕೆ ವಿನಿಯೋಗಿಸುವ ಯೋಜನೆ ರೂಪಿಸಲಾಗಿದೆ.

## 3. ವೃತ್ತಿ ಶಿಕ್ಷಣಕ್ಕೆ ಪ್ರಾಧಾನ್ಯತೆ

ಪಡೆದ ಶಿಕ್ಷಣ ಕೇವಲ ಪ್ರಮಾಣಪತ್ರಕ್ಕೆ ಮಾತ್ರ ಸೀಮಿತವಾಗಬಾರದು, ಯಾವುದಾದರೂ ವೃತ್ತಿ ಮಾಡಿ ಜೀವನ ನಿರ್ವಹಣೆಗೆ ನೆರವಾಗುವ ಅಸ್ತ್ರವಾಗಬೇಕು. ವಿದ್ಯಾರ್ಥಿಯ ಮಗು 6ನೇ ತರಗತಿಯಿಂದಲೇ ವೃತ್ತಿ ಶಿಕ್ಷಣ ಆರಂಭವಾಗಲಿದೆ. ಮಗು ಕೃಷಿ, ಪಶುಸಂಗೋಪನೆ, ಗುಡಿಕೈಗಾರಿಕೆ, ಕುಲಕಸುಬುಗಳನ್ನು ವ್ಯವಸ್ಥಿತವಾಗಿ ಮಾಡಿ ನಗರದಲ್ಲಿರುವ ಕೌಶಲ್ಯಗಳನ್ನು ತನ್ನ ಗ್ರಾಮದಲ್ಲೇ ದೊರಕಿಸಿಕೊಳ್ಳುವಂತೆ ವೃತ್ತಿ ಶಿಕ್ಷಣದ ಪಠ್ಯಕ್ರಮ ರೂಪಿಸಿದರೆ ಬಹುಪಾಲು ಗ್ರಾಮಗಳು ಸ್ವಾವಲಂಬಿಯಾಗುವುದರಿಂದ ವ್ಯಕ್ತಿಗೆ ಸ್ವ ಉದ್ಯೋಗಕ್ಕೆ ದಾರಿದೀಪವಾಗುತ್ತದೆ.

## 4. ಉನ್ನತ ಶಿಕ್ಷಣಕ್ಕೆ ಪ್ರಾಮುಖ್ಯತೆ & ಸಂಶೋಧನಾ ಫೌಂಡೇಶನ್.

ನೂತನ ಶಿಕ್ಷಣ ನೀತಿಯು ದೇಶದಲ್ಲಿ "ಉನ್ನತ ಶಿಕ್ಷಣ ಆಯೋಗ" ಸ್ಥಾಪಿಸಲಿದೆ. ಇದು ವೈದ್ಯಕೀಯ & ಕಾನೂನು ಶಿಕ್ಷಣವನ್ನು ಹೊರತುಪಡಿಸಿ ಇತರ ಎಲ್ಲಾ ಉನ್ನತ ಶಿಕ್ಷಣಕ್ಕೆ ಮಾರ್ಗದರ್ಶಕನಾಗಿ, ನಿಯಂತ್ರಕನಾಗಿ, ನಿರ್ದೇಶಕನಾಗಿ ಕಾರ್ಯ ನಿರ್ವಹಿಸಲಿದೆ. ಇದರೊಂದಿಗೆ ರಾಷ್ಟ್ರೀಯ ಸಂಶೋಧನಾ ಫೌಂಡೇಶನ್ ಸ್ಥಾಪಿಸಲಾಗುವುದು. ಈ ಕಾರಣದಿಂದ

ತಾವು ಇದನ್ನು SR WORLD ಟೆಲಿಗ್ರಾಂ ಗ್ರೂಪ್ ನಿಂದ ಪಡೆದಿರುವಿರಿ.
ಈಗಾಗಲೇ ಆ ಗ್ರೂಪ್ ನಲ್ಲಿ 2,50,000 ದಷ್ಟು ಸ್ಪರ್ಧಾರ್ಥಿಗಳು JOIN ಆಗಿದ್ದಾರೆ.
ನೀವೂ JOIN ಆಗಿ, ಗ್ರೂಪ್ ಲಿಂಕ್ ಗಾಗಿ 9538781570ಗೆ ವಾಟ್ಸಾಪ್/ಟೆಲಿಗ್ರಾಂ ಮಾಡಿ.

ದೇಶದಲ್ಲಿ ಸಂಶೋಧನಾ ಕ್ಷೇತ್ರಕ್ಕೆ ಬಲ ಬಂದಂತಾಗುತ್ತದೆ. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ರಕ್ಷಣೆ & ಬಾಹ್ಯಾಕಾಶ ತಂತ್ರಜ್ಞಾನ, ಭೂಗು ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಕ್ಷೇತ್ರಗಳಿಗೆ ಒತ್ತು ನೀಡುವುದರಿಂದ ದೇಶದಲ್ಲಿ ವಿಜ್ಞಾನ & ತಂತ್ರಜ್ಞಾನದಲ್ಲಿ ಅಪಾರ ಸಾಧನೆ ಮಾಡಲಿದೆ.

ಉನ್ನತ ಶಿಕ್ಷಣಕ್ಕಾಗಿ ವಿದೇಶಿ ವಿಶ್ವವಿದ್ಯಾಲಯಗಳು ಭಾರತದಲ್ಲಿ ಕ್ಯಾಂಪಸ್ ಸ್ಥಾಪಿಸಲು ಅನುಮತಿ ನೀಡಿದೆ. ಇದರಿಂದ ಭಾರತೀಯ ವಿದ್ಯಾರ್ಥಿ ವಿದೇಶದ ವಿಶ್ವವಿದ್ಯಾಲಯದಲ್ಲಿ ಕಲಿಯಬೇಕೆಂಬ ಕನಸು, ನನಸಾಗಲಿದೆ. ಪಾಲಿ, ಪರ್ಷಿಯನ್, ಪ್ರಾಕೃತ ರಾಷ್ಟ್ರೀಯ ಸಂಸ್ಥೆ, ಭಾರತೀಯ ಅನುವಾದ ಮತ್ತು ವ್ಯಾಖ್ಯಾನ ಸಂಸ್ಥೆಯನ್ನು ಸ್ಥಾಪಿಸುವ ಉದ್ದೇಶವನ್ನು ಹೊಸ ಶಿಕ್ಷಣ ನೀತಿ ಹೊಂದಿದೆ.

## 5. ಶಿಕ್ಷಕರ ತರಬೇತಿಗೆ, ವರ್ಗಾವಣೆ & ಪಠ್ಯಕ್ರಮ.

2030 ರ ವೇಳೆಗೆ ಶಿಕ್ಷಕರ ಹುದ್ದೆ ನೇಮಕಾತಿಗೆ 4 ವರ್ಷದ ಬಿ.ಇಡಿಯನ್ನು ಕನಿಷ್ಠ ವಿದ್ಯಾರ್ಹತೆಯಾಗಿ ಕಡ್ಡಾಯಗೊಳಿಸಲಿದೆ, ಶಿಕ್ಷಕರನ್ನು ಪದೇ ಪದೇ ವರ್ಗಾವಣೆ ಮಾಡದಿರಲು ನೀತಿ ನಿರ್ಧರಿಸಿದೆ, ಚುನಾವಣೆ & ಜನಗಣತಿ ಇತರ ಶಿಕ್ಷಣೇತರ ಚಟುವಟಿಕೆಗಳಿಗೆ ಶಿಕ್ಷಕರನ್ನು ನಿಯೋಜಿಸದಿರುವ ಅಂಶವಿದೆ.

ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ನೂತನ ನೀತಿಯಲ್ಲಿ ಮತ್ತು ಸಮಗ್ರವಾಗಿ ರೂಪಿಸಲು ತೀರ್ಮಾನಿಸಿದೆ.

## 6. ಇತರ ಅಂಶಗಳು.

ವಿದ್ಯಾರ್ಥಿಯು 5ನೇ ತರಗತಿಯವರೆಗೆ ಮಾತೃಭಾಷೆ ಅಥವಾ ಸ್ಥಳೀಯ ಭಾಷೆಯಲ್ಲಿ ಕಲಿಕೆಯ ಒತ್ತು ನೀಡಲಾಗಿದೆ. ಇದರೊಂದಿಗೆ ದೇಶಾದ್ಯಂತ ತ್ರಿಭಾಷಾ ಸೂತ್ರವನ್ನು ಪರಿಣಾಮಕಾರಿಯಾಗಿ ಅನುಷ್ಠಾನಿಸಲು ಆದ್ಯತೆ ನೀಡಲಾಗಿದೆ. ಮಕ್ಕಳು ಕೇವಲ ಪುಸ್ತಕದ ಹುಳುಗಳಾಗದೆ ಇರುವಂತೆ ಪಠ್ಯೇತರ ಚಟುವಟಿಕೆಗಳಿಗೆ ಪಠ್ಯಕ್ರಮಕ್ಕೆ ಸಮಾನ ಸ್ಥಾನಮಾನ ನೀಡಲಾಗಿದೆ.

ಇಷ್ಟೆಲ್ಲಾ ಲಾಭಗಳ ಮಧ್ಯೆಯೂ, ಯಾವುದೇ ಒಂದು ವ್ಯವಸ್ಥೆ ಹೊಸದಾಗಿ ಬಂದರೆ ಹಲವು ಉತ್ತಮ ಅಂಶಗಳೊಂದಿಗೆ ನ್ಯೂನತೆಗಳಿರುವುದು ಸಾಮಾನ್ಯ. ಶೀಘ್ರವೇ ಆ ನ್ಯೂನತೆಗಳನ್ನ ಸರಿಪಡಿಸಿಕೊಂಡು ಮೌಲ್ಯಾಧಾರಿತ ಶಿಕ್ಷಣಕ್ಕೆ ಬೇಗ ಸಜ್ಜಾಗಬೇಕಿದೆ.

### ನೂತನ ಶಿಕ್ಷಣ ನೀತಿಯಲ್ಲಿರುವ ನ್ಯೂನತೆಗಳು.

ತಾವು ಇದನ್ನು SR WORLD ಟೆಲಿಗ್ರಾಂ ಗ್ರೂಪ್ ನಿಂದ ಪಡೆದಿರುವಿರಿ.
ಈಗಾಗಲೇ ಆ ಗ್ರೂಪ್ ನಲ್ಲಿ 2,50,000 ದಷ್ಟು ಸ್ಪರ್ಧಾರ್ಥಿಗಳು JOIN ಆಗಿದ್ದಾರೆ.
ನೀವೂ JOIN ಆಗಿ, ಗ್ರೂಪ್ ಲಿಂಕ್ ಗಾಗಿ 9538781570ಗೆ ವಾಟ್ಸಾಪ್/ಟೆಲಿಗ್ರಾಂ ಮಾಡಿ.

1. ತ್ರಿಭಾಷಾ ಸೂತ್ರವನ್ನು ತಮಿಳುನಾಡು ತಿರಸ್ಕರಿಸಿದೆ.
2. ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ಮಹತ್ವ ನೀಡಿರುವುದರಿಂದ ಅಂಗನವಾಡಿ ಕಾರ್ಯಕರ್ತರ ನೇಮಕಾತಿ ಅಧಿಕ ಆಗಬೇಕಿದೆ ಅವರಿಗೆ ಪ್ರಸ್ತುತ ಇರುವ ಇತರ ಕೆಲಸಗಳಿಂದ ಮುಕ್ತಿಗೊಳಿಸಬೇಕಿದೆ.

3. ಭಾರತಕ್ಕೆ ಇತರ ವಿಶ್ವವಿದ್ಯಾಲಯಗಳ ಕ್ಯಾಂಪಸ್ ಬರುವ ಮುಂಚೆ, ಭಾರತದ ವಿಶ್ವವಿದ್ಯಾಲಯಗಳ ಗುಣಮಟ್ಟವನ್ನು ಹೆಚ್ಚಿಸಬೇಕಿದೆ.

4. ಪದವಿ ಶಿಕ್ಷಣ 4 ವರ್ಷ ವಾಗುವುದರಿಂದ, 2 ವರ್ಷದ ಡಿಪ್ಲೋಮಾಗೆ ಸೇರಿ ಯುವಕರು ಪದವಿ ಪಡೆಯುವವರ ಸಂಖ್ಯೆ ಹೆಚ್ಚಾಗಬಹುದು.

5. ತಾಂತ್ರಿಕ ಶಿಕ್ಷಣ, ಸಂಶೋಧನಾ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡುವ ಕುರಿತು ನೀತಿಯಲ್ಲಿ ಉಲ್ಲೇಖವಾಗಿದೆ. ಪ್ರಸ್ತುತ ಮೂಲಭೂತ ಸೌಕರ್ಯಗಳಿಂದ ಬಳಲುತ್ತಿರುವ ಸರ್ಕಾರಿ ಕಾಲೇಜುಗಳನ್ನು ಪುನರುಜ್ಜೀವನಗೊಳಿಸಬೇಕಿದೆ.

ತಾವು ಇದನ್ನು SR WORLD ಟೆಲಿಗ್ರಾಂ ಗ್ರೂಪ್ ನಿಂದ ಪಡೆದಿರುವಿರಿ.
ಈಗಾಗಲೇ ಆ ಗ್ರೂಪ್ ನಲ್ಲಿ 2,50,000 ದಷ್ಟು ಸ್ಪರ್ಧಾರ್ಥಿಗಳು JOIN ಆಗಿದ್ದಾರೆ.
ನೀವೂ JOIN ಆಗಿ, ಗ್ರೂಪ್ ಲಿಂಕ್ ಗಾಗಿ 9538781570ಗೆ ವಾಟ್ಸಾಪ್/ಟೆಲಿಗ್ರಾಂ ಮಾಡಿ.

## ಉಪಸಂಹಾರ

ನೂತನ ಶಿಕ್ಷಣ ನೀತಿಯ ಕರಡು ಅಭ್ಯಸಿಸಿದರೆ, ಇದನ್ನು ಅನುಷ್ಠಾನಗೊಳಿಸಿದರೆ ಭಾರತ ನಿಜವಾಗಲೂ ವಿಶ್ವಗುರು ಆಗಲು ಸಾಧ್ಯವಿದೆ. ಆದರೆ ಈ ನೀತಿ ಹಿಂದಿನ ಎಲ್ಲಾ ನೀತಿಗಳ ಸಾಲಿನಲ್ಲಿ ಸೇರಿ, ಕೇವಲ ಘೋಷಣೆಗೆ ಮಾತ್ರ ಸೀಮಿತವಾದರೆ ಜನರು ಮಾತನಾಡುವ ಹಾಗೆ "ಹಳೆಯ ಬಾಟಲಿಯಲ್ಲಿ ಹೊಸ ಮದ್ಯ" ಎಂದು ಹಾಸ್ಯಕ್ಕೆ ದಾರಿಯಾಗುತ್ತದೆ.

ಶಶಿಕಾಂತ ಬನಶೆಟ್ಟಿ.
ದಿ. 18.09.2021.